# ಮಿತವ್ಯಯ ಸಹಕಾರ ಸಂಘಗಳ ಒಕ್ಕೂಟ ನಿಯಮಿತ

(ನೊಂದಣಿ ಸಂಖ್ಯೆ : ಜೆಆರ್‌ಬಿ : ಆರ್‌ಜಿಎನ್ : 30: 36950 : 2007–08)
ನಂ. 7/1, 2ನೇ ಮಹಡಿ, 2ನೇ ಮುಖ್ಯರಸ್ತೆ, ಆದರ್ಶನಗರ, 9ನೇ ಅಡ್ಡರಸ್ತೆ, ಚಾಮರಾಜಪೇಟೆ, ಬೆಂಗಳೂರು–560018.

Mithavyaya Sahakara Sanghagala Okkuta Niyamitha
Flat No. 102, Ground Floor
Vibrant White Pearl Apartments
No 269/1-1, Kasturba Nagar
Mysore Main Road, BENGALURU - 560 026
Phone : 080-26755214

## ಮರಣ ಪರಿಹಾರ ಯೋಜನೆ

### ಸದಸ್ಯತ್ವಕ್ಕಾಗಿ ಅರ್ಜಿ

ಗೆ, ದಿನಾಂಕ : ..............................

ಮುಖ್ಯ ಕಾರ್ಯನಿರ್ವಾಹಕರು
ಮಿತವ್ಯಯ ಸಹಕಾರ ಸಂಘಗಳ ಒಕ್ಕೂಟ (ನಿ)
ಬೆಂಗಳೂರು – 560 018.

ಮಾನ್ಯರೇ,

ನಮ್ಮ ಸಂಘ ..................................................................................................ದ ಪತಿಯಿಂದ ಈ ಅರ್ಜಿಯೊಂದಿಗೆ ಮರಣ ಪರಿಹಾರ ಯೋಜನೆಗೆ ಸೇರಲು ಅರ್ಹ ಸದಸ್ಯರ ವಿವರಗಳನ್ನು, ಸೂಚಕ ತೇವಣಿ, ಪ್ರವೇಶ ಶುಲ್ಕ ಹಾಗೂ ಅರ್ಜಿ ಶುಲ್ಕದೊಂದಿಗೆ ಚೆಕ್ ಸಂಖ್ಯೆ ................................................................ ದಿನಾಂಕ........................... ರೂ...................... ಲಗತ್ತಿಸಲಾಗಿದೆ.

ನಾವು ಒಕ್ಕೂಟದ ಮರಣ ಪರಿಹಾರ ನಿಯಮಗಳನ್ನು ಸಂಪೂರ್ಣವಾಗಿ ಓದಿ ತಿಳಿದುಕೊಂಡು ಅದಕ್ಕೆ ಹಾಗೂ ಆಗಿಂದ್ದಾಗ್ಗೆ ಆಗುವ ತಿದ್ದುಪಡಿಗಳಿಗೂ ಬದ್ಧವಾಗಿರುತ್ತೇವೆ. ನಮ್ಮ ಸಂಘವು ಮರಣ ಪರಿಹಾರ ಯೋಜನೆಯ ಎಲ್ಲಾ ಜವಾಬ್ದಾರಿ ಮತ್ತು ಕಾನೂನಿನ ನಿಯಮಾವಳಿಗಳಿಗೆ ಬದ್ಧವಾಗಿರುತ್ತದೆ. ನಮ್ಮ ಸದಸ್ಯರಿಗೆ ಸಂಬಂಧಪಟ್ಟ ಎಲ್ಲಾ ವಿವರಗಳನ್ನು ಒಕ್ಕೂಟಕ್ಕೆ ಸಂಪೂರ್ಣವಾಗಿ ಆಗಿಂದ್ದಾಗ್ಗೆ ಒದಗಿಸಲು ಬದ್ದರಾಗಿದ್ದೇವೆ.

ಮಿತವ್ಯಯ ಸಹಕಾರ ಸಂಘಗಳ ಒಕ್ಕೂಟವು ಯಾವುದೇ ವಿಷಯಗಳು ತಪ್ಪು ಎಂದು ತಿಳಿದು ಬಂದಲ್ಲಿ ಮರಣ ಪರಿಹಾರ ಯೋಜನೆಯಡಿಯಲ್ಲಿ ಬಿಡುಗಡೆ ಮಾಡುವ ಹಣವನ್ನು ತಡೆಹಿಡಿಯಬಹುದು ಅಥವಾ ಮುಟ್ಟುಗೋಲು ಹಾಕಿಕೊಳ್ಳಲು ಒಪ್ಪಿರುತ್ತೇವೆ.

ದಯಮಾಡಿ ಮರಣ ಪರಿಹಾರ ಯೋಜನೆಯಡಿಯಲ್ಲಿ ಸದಸ್ಯತ್ವವನ್ನು ಕೊಟ್ಟು ಮರಣ ಪರಿಹಾರ ಯೋಜನೆಯ ಪ್ರಮಾಣ ಪತ್ರವನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇವೆ.

ಮೇಲೆ ತಿಳಿಸಿದ ಎಲ್ಲಾ ವಿಷಯಗಳು ಹಾಗೂ ಸದಸ್ಯರ ವಿವರಗಳು ಸರಿಯಾಗಿದ್ದು ನಮಗೆ ತಿಳಿದ ಮಟ್ಟಿಗೆ ಸತ್ಯವಾಗಿದೆಯೆಂದು ಘೋಷಿಸುತ್ತೇವೆ.

ಸಂಘದ ಮುದ್ರೆ.

ಇಂತಿ

(ಅಧ್ಯಕ್ಷರು / ಮುಖ್ಯ ಕಾರ್ಯನಿರ್ವಾಹಕರು)

ಅಡಕ
1. ಮರಣ ಪರಿಹಾರ ಯೋಜನೆಯ ನಿಯಮಗಳು
2. ಯೋಜನೆಗೆ ಸೇರಬಯಸುವ ಸದಸ್ಯರ ಪಟ್ಟಿ

Scanned by CamScanner

ಸೂಚನೆಗಳು :

1. ಹೊಸ ಸದಸ್ಯರಿಗೆ ಪ್ರತ್ಯೇಕವಾಗಿ ವಿವರಗಳನ್ನು ಒದಗಿಸತಕ್ಕದ್ದು.
2. ಹಾಲಿ ಇರುವ ಸದಸ್ಯರಿಗೂ ಪ್ರತ್ಯೇಕವಾಗಿ ವಿವರಗಳನ್ನು ಒದಗಿಸತಕ್ಕದ್ದು. (ಎಲ್ಲಾ ಕಾಲಂಗಳನ್ನೂ ತುಂಬಬೇಕು.)
3. ಹೊಸದಾಗಿ ಸೇರ್ಪಡೆಯಾಗ ಬಯಸುವ ಸದಸ್ಯರ ಪಟ್ಟಿಯಲ್ಲಿ ಕಾಲಂ 3,4,5,10 ಗಳನ್ನು ಖಾಲಿ ಬಿಡತಕ್ಕದ್ದು.
4. 55 ವರ್ಷ ವಯಸ್ಸಿನ ಮೇಲ್ಪಟ್ಟವರನ್ನು ಯೋಜನೆಗೆ ಸೇರಿಸಿಕೊಳ್ಳಲಾಗುವುದಿಲ್ಲ.
5. ಒಕ್ಕೂಟಕ್ಕೆ ಹಣವನ್ನು ಚೆಕ್ ಮೂಲಕ ಮಾತ್ರ ಪಾವತಿಸತಕ್ಕದ್ದು.
6. ಹೆಚ್ಚಿನ ಮಾಹಿತಿಗಾಗಿ ಮಿತವ್ಯಯ ಸಹಕಾರ ಸಂಘಗಳ ಒಕ್ಕೂಟದ ಕಛೇರಿಯನ್ನು ಸಂಪರ್ಕಿಸಿ.

Scanned by CamScanner

# ಮಿತವ್ಯಯ ಸಹಕಾರ ಸಂಘಗಳ ಒಕ್ಕೂಟ ನಿಯಮಿತ

(ನೊಂದಣಿ ಸಂಖ್ಯೆ : ಜೆಆರ್‌ಬಿ : ಆರ್‌ಜಿಎನ್ : 30: 36950 : 2007-08)
ನಂ. 7/1, 2ನೇ ಮಹಡಿ, 2ನೇ ಮುಖ್ಯರಸ್ತೆ, ಆದರ್ಶನಗರ, 9ನೇ ಅಡ್ಡರಸ್ತೆ, ಚಾಮರಾಜಪೇಟೆ, ಬೆಂಗಳೂರು-560018.

## ಮರಣ ಪರಿಹಾರ ಯೋಜನೆಯ ನಿಯಮಗಳು

### (ಬೈಲಾ ಸಂಖ್ಯೆ 17(14)ರ ಪ್ರಕಾರ ರಚಿಸಲಾಗಿದೆ)

**ಹೆಸರು ಮತ್ತು ಸಂಸ್ಥೆ**

1. ಈ ಯೋಜನೆಯ ಹೆಸರು ''ಮರಣ ಪರಿಹಾರ'' ಯೋಜನೆ ಎಂದು ಕರೆಯಲಾಗುವುದು.
2. ಯೋಜನೆಯನ್ನು ಮಿತವ್ಯಯ ಸಹಕಾರ ಸಂಘಗಳ ಒಕ್ಕೂಟ, ಬೆಂಗಳೂರಿನವರು ನಿರ್ವಹಿಸುತ್ತಿರುತ್ತಾರೆ.

**ಉದ್ದೇಶ**

3. ಈ ಯೋಜನೆಯ ಉದ್ದೇಶವು ಸದಸ್ಯ ಸಂಘಗಳಲ್ಲಿ ಸಾಲ ಪಡೆದ ಸದಸ್ಯನು/ಳು ಸಾಲವು ಸಂಪೂರ್ಣವಾಗಿ ತೀರುವ ಮುನ್ನವೇ ಆಕಸ್ಮಿಕವಾಗಿ ಮರಣಹೊಂದಿದರೆ, ಸಂಘಕ್ಕೆ ಮರಣ ಹೊಂದಿದ ಕುಟುಂಬದವರಿಗೆ ಹಾಗೂ ಜಾಮೀನುದಾರರಿಗೆ ಸಾಲದ ಬಾಧೆಯಿಂದ ರಕ್ಷಿಸುವುದಾಗಿರುತ್ತದೆ.

**ಸದಸ್ಯತ್ವ**

4. ಈ ಯೋಜನೆಯಡಿಯಲ್ಲಿ ಸದಸ್ಯತ್ವವು ಒಕ್ಕೂಟದ ಸದಸ್ಯ ಸಂಘದ ಸದಸ್ಯರುಗಳು ಹಾಗೂ ಸಂಘದ ನೌಕರರುಗಳಿಗೆ ಸೀಮಿತವಾಗಿರುತ್ತದೆ.
5. ಈ ಯೋಜನೆಯ ಸದಸ್ಯತ್ವವು ಒಕ್ಕೂಟದ ಕಾಯಿದೆ ಮತ್ತು ನಿಬಂಧನೆಗೊಳಪಟ್ಟಿರುತ್ತದೆ.
6. ಈ ಯೋಜನೆಗೆ ಸೇರ ಬಯಸುವ ಸದಸ್ಯನ ವಯಸ್ಸು 18 ವರ್ಷ ತುಂಬಿರಬೇಕು ಹಾಗೂ 55 ವರ್ಷಕ್ಕೆ ಮೀರಿರಬಾರದು. ಆದರೆ ಈ ಯೋಜನೆಯಲ್ಲಿನ ಸದಸ್ಯನ ವಯಸ್ಸು 60 ವರ್ಷ ಪೂರ್ಣಗೊಳಿಸುವವರೆಗೂ ಚಾಲ್ತಿಯಲ್ಲಿರುತ್ತದೆ.
7. ಈ ಯೋಜನೆಗೆ ಸೇರ ಬಯಸುವ ಅರ್ಜಿದಾರನು ಆರೋಗ್ಯವಾಗಿರಬೇಕು. ಯಾವುದೇ ರೀತಿಯ ತೀವ್ರಸ್ವರೂಪದ ಕಾಯಿಲೆ/ರೋಗದಿಂದ ಬಳಲುತ್ತಿರಬಾರದು. ಈ ಯೋಜನೆಗೆ ಸೇರುವಾಗ ಹಾಗೂ ನಂತರದಲ್ಲಿ ಠೇವಣಿ ಹೆಚ್ಚಿಸುವಾಗ ಸದಸ್ಯನು ಆರೋಗ್ಯವಂತನಾಗಿರಬೇಕು. ಈ ಬಗ್ಗೆ ಸದಸ್ಯ ಸಂಘವು ಕಾಳಜಿ ಹಾಗೂ ಮುತುವರ್ಜಿಯನ್ನು ವಹಿಸಿ ಸದಸ್ಯನ ಆರೋಗ್ಯದ ಬಗ್ಗೆ ಧೃಡೀಕರಿಸಬೇಕು. ಇದನ್ನು ಹೊಸದಾಗಿ ಸೇರುವ ಸದಸ್ಯನಿಗೂ ಹಾಗೂ ನಂತರದಲ್ಲಿ ಠೇವಣಿಯನ್ನು ಹೆಚ್ಚಿಸುವಾಗಲೂ ಪಾಲಿಸಬೇಕು.

**ಯೋಜನೆಯ ಪ್ರವೇಶಕ್ಕೆ ಕಾರ್ಯವಿಧಾನ ಮತ್ತು ಕಾರ್ಯನೀತಿ**

8. ಈ ಯೋಜನೆಗೆ ಸೇರಬಯಸುವ ಪ್ರತಿಯೊಬ್ಬ ಸದಸ್ಯನು ಮೇಲೆ ತಿಳಿಸಿದ ನಿಯಮ 4 ರಿಂದ 7 ರವರೆಗೆ ಊರ್ಜಿತವಾಗಿದ್ದಲ್ಲಿ ಯೋಜನೆಯನ್ನು ಸೇರಲು ಅರ್ಹನಾಗಿರುತ್ತಾನೆ ಹಾಗೂ ತನ್ನ ಸಂಘದಿಂದ ಅರ್ಜಿಯನ್ನು ಪಡೆದು ವಿವರಗಳೊಂದಿಗೆ ಠೇವಣಿಯನ್ನು ಪಾವತಿಸಬೇಕು. ಅನಂತರ ಸದಸ್ಯ ಸಂಘವು ಅರ್ಜಿಯನ್ನು ಪರಿಶೀಲಿಸಿ, ಒಕ್ಕೂಟಕ್ಕೆ ವಿವರಗಳೊಂದಿಗೆ ಕಳುಹಿಸಬೇಕು. (ನೆರೆಹೊರೆಯ ಪತ್ತಿನ ಸಹಕಾರ ಸಂಘಗಳು ಹಾಗೂ ಮಹಿಳಾ ಸಹಕಾರ ಸಂಘಗಳು ಸದಸ್ಯನ/ಳ ಭಾವಚಿತ್ರವನ್ನು ಸಹ ಅರ್ಜಿಯೊಂದಿಗೆ ಕಳುಹಿಸಬೇಕು.)
9. ಸದಸ್ಯ ಸಂಘಗಳು ಯೋಜನೆಗೆ ಸೇರಬಯಸುವವರ ವಿವರಗಳೊಂದಿಗೆ, ನಿಗಧಿತ ಠೇವಣಿಯ ಜೊತೆಯಲ್ಲಿ ಒಟ್ಟಾರೆಯಾಗಿ ಸದಸ್ಯರುಗಳನ್ನು ಸೇರಿಸಬಹುದು.
10. ಮಿತವ್ಯಯ ಸಹಕಾರ ಸಂಘಗಳ ಒಕ್ಕೂಟವು ಅರ್ಜಿ ಸಲ್ಲಿಸಿದ ಸದಸ್ಯ ಸಂಘಕ್ಕೆ ಮರಣ ಪರಿಹಾರ ಯೋಜನೆಯಡಿಯಲ್ಲಿ ನೋಂದಾಯಿಸುವ ಬಗ್ಗೆ ರಸೀದಿಯನ್ನು ನೀಡುವುದು.
11. ಯಾವುದೇ ರೀತಿಯ ತಪ್ಪು ವಿವರಗಳನ್ನು ಸದಸ್ಯ ಸಂಘವಾಗಲೀ ಅಥವ ಯೋಜನೆಗೆ ಸೇರ ಬಯಸುವ ವ್ಯಕ್ತಿಯು ನೀಡಿದ್ದಲ್ಲಿ, ಸದಸ್ಯರು ಮರಣ ಹೊಂದಿದಾಗ ವಾರಸುದಾರರಿಗೆ ಅಥವಾ ಸದಸ್ಯ ಸಂಘಕ್ಕೆ ಪರಿಹಾರವನ್ನು ಪಡೆಯಲು ಅರ್ಹತೆಯಿರುವುದಿಲ್ಲ. ಆದ್ದರಿಂದ ಯೋಜನೆಗೆ ಸೇರ ಬಯಸುವ ಸದಸ್ಯರು ತಮ್ಮ ಸಂಘಕ್ಕೆ ಸರಿಯಾದ ಸಂಪೂರ್ಣ ಮಾಹಿತಿಯನ್ನು ಒದಗಿಸಬೇಕು.
12. ಒಕ್ಕೂಟವು ಸದಸ್ಯ ಸಂಘದೊಂದಿಗೆ ಮಾತ್ರ ವ್ಯವಹರಿಸುತ್ತದೆ. ಆದ್ದರಿಂದ ಮರಣ ಪರಿಹಾರ ಯೋಜನೆಗೆ ಸೇರುವುದು, ವಾಪಸ್ಸು ಪಡೆಯುವುದು ಅಥವ ಮರಣ ಪರಿಹಾರದ ಬಿಡುಗಡೆ ಎಲ್ಲವೂ ಸದಸ್ಯ ಸಂಘದ ಮುಖಾಂತರವೇ ವ್ಯವಹರಿಸುತ್ತದೆ. ಸಂಘವು ಯಾವುದೇ ವಿಧವಾದ ಖಟ್ಲೆ ಹಾಗೂ ಇತರೆ ವ್ಯವಹಾರಗಳಿಗೆ ಮೊದಲನೆಯ ವಾದಿಯಾಗಿರುತ್ತದೆ.
13. ಯಾವುದೇ ತಪ್ಪು ಒಪ್ಪುಗಳಿಗೆ ಸದಸ್ಯ ಸಂಘಗಳು ಮತ್ತು ಸದಸ್ಯರೇ ಜವಾಬ್ದಾರರಾಗಿರುತ್ತಾರೆ. ಒಕ್ಕೂಟವು ಇದಕ್ಕೆ ಜವಾಬ್ದಾರಿಯಾಗಿರುವುದಿಲ್ಲ.
14. ಸದಸ್ಯತ್ವಕ್ಕೆ ಅರ್ಜಿಯ ಜೊತೆಯಲ್ಲಿ ರೂ. 5/- ಅರ್ಜಿ ಶುಲ್ಕ, ರೂ. 10/- ಪ್ರವೇಶ ಶುಲ್ಕವನ್ನು ನೀಡಬೇಕು. ಪ್ರವೇಶ ಶುಲ್ಕವು ರೂ.500/- ಗಳಿಗೆ ರೂ. 10/- ಎಂದು ನಿಗಧಿಪಡಿಸಲಾಗಿದೆ. ವಿವರಗಳು ಕೆಳಕಂಡಂತಿವೆ.

| ಮ. ಪ. ಯೋ. ಠೇವಣಿ | ಪ್ರವೇಶ ಶುಲ್ಕ |
|---|---|
| 500 | 10 |
| 1000 | 20 |
| 1500 | 30 |
| 2000 | 40 |
| 2500 | 50 |

15. ಯೋಜನೆಯ ಪ್ರವೇಶಕ್ಕೆ ಅರ್ಜಿಯನ್ನು ಎಲ್ಲಾ ವಿವರಗಳೊಂದಿಗೆ ಪ್ರವೇಶ ಶುಲ್ಕ, ಅರ್ಜಿಯ ಶುಲ್ಕ ಮತ್ತು ಠೇವಣಿಯೊಂದಿಗೆ ಒಕ್ಕೂಟಕ್ಕೆ ಸಂದಾಯವಾದ ನಂತರ, ಒಕ್ಕೂಟವು ಎಲ್ಲಾ ವಿವರಗಳನ್ನು ಪರಿಶೀಲಿಸಿ, ಮರಣ ಪರಿಹಾರ ಯೋಜನೆಯಡಿಯಲ್ಲಿ ಸೇರಿರುವ ಎಲ್ಲಾ ಸದಸ್ಯರ ವಿವರಗಳಾದ, ಸದಸ್ಯರ ಹೆಸರು, ಹುಟ್ಟಿದ ದಿನಾಂಕ, ತಂದೆಯ/ಗಂಡನ ಹೆಸರು, ಠೇವಣಿ ಹಾಗೂ ಮರಣ ಪರಿಹಾರದ ಹಣ ಮುಂತಾದ ವಿವರಗಳನ್ನು ಒಳಗೊಂಡ ಪ್ರಮಾಣ ಪತ್ರವನ್ನು ನೀಡುತ್ತದೆ.

Scanned by CamScanner

**ಸದಸ್ಯನು ಮರಣ ಹೊಂದಿದಾಗ ನೀಡುವ ಪರಿಹಾರ ಧನ :**

ಸದಸ್ಯನು ಮರಣ ಹೊಂದಿದಾಗ ಸದಸ್ಯ ಸಂಘದಲ್ಲಿ ಆ ಮರಣ ಹೊಂದಿದ ಸದಸ್ಯನ ಸದಸ್ಯತ್ವವು ಚಾಲ್ತಿಯಲ್ಲಿದ್ದು ಮುಂದುವರಿದಿದ್ದರೆ, ಅಂ
16. ಸದಸ್ಯನು ಮರಣ ಹೊಂದಿದಾಗ ಸದಸ್ಯ ಸಂಘದಲ್ಲಿ ಆ ಮರಣ ಹೊಂದಿದ ಸದಸ್ಯನ ಸದಸ್ಯತ್ವವು ಚಾಲ್ತಿಯಲ್ಲಿದ್ದು ಮುಂದುವರಿದಿದ್ದರೆ, ಅಂ... ಸದಸ್ಯನು ಮರಣ ಹೊಂದಿದಾಗ ಸದಸ್ಯ ಸಂಘಕ್ಕೆ ನೀಡುತ್ತದೆ. ಅದಲ್ಲದೇ ಸದಸ್ಯನ ಠೇವಣಿ ಹಣವನ್ನು
ಸದಸ್ಯರ ಠೇವಣಿಯ 19 ಪಟ್ಟು ಹಣವನ್ನು ಪರಿಹಾರಧನವಾಗಿ ಒಕ್ಕೂಟವು ಸದಸ್ಯ ಸಂಘಕ್ಕೆ ನೀಡುತ್ತದೆ. ಅದಲ್ಲದೇ ಸದಸ್ಯನ ಠೇವಣಿ ಹಣವ
ವಾಪಸ್ಸು ನೀಡುತ್ತದೆ. ಅಂತಹ ಒಟ್ಟು ಪರಿಹಾರದ ಹಣವು ಒಕ್ಕೂಟದ ಮರಣ ಪರಿಹಾರ ಯೋಜನೆಯ ಗರಿಷ್ಠ ಮಿತಿಯಾದ ರೂ.50,000/-
(ಠೇವಣಿಯನ್ನೊಳಗೊಂಡು) ಕ್ಕೆ ಸೀಮಿತವಾಗಿರುತ್ತದೆ.

17. ಒಕ್ಕೂಟದ 11, 23, 24 (24 (ಉ) ವನ್ನು ಬಿಟ್ಟು) ವಾಪಸಾತಿ ಪಡೆದ/ಸದಸ್ಯತ್ವವನ್ನು ರದ್ದುಪಡಿಸಿದ ಸಂದರ್ಭದಲ್ಲಿ, ಯೋಜನೆಯಡಿಯಲ್ಲಿನ
ಪರಿಹಾರವನ್ನು ನೀಡಲಾಗುವುದಿಲ್ಲ, ಅಂತಹವರಿಗೆ ವಾರ್ಷಿಕ ಶೇಕಡ 2% ರಷ್ಟು ಬೋನಸ್ಸನ್ನು ನೀಡಲಾಗುತ್ತದೆ.

18. ಈ ಯೋಜನೆಯಲ್ಲಿ ಸದಸ್ಯತ್ವವು ಮರಣ ಪರಿಹಾರ ಠೇವಣಿ ಸಂದಾಯವಾದ ಹನ್ನೊಂದನೆಯ ದಿನದಿಂದ ಚಾಲ್ತಿಗೆ ಬರುತ್ತದೆ. ಯೋಜನೆಯ
ಪರಿಹಾರವು ಒಕ್ಕೂಟದ ನಿಯಮಗಳಿಗೆ ಒಳಪಟ್ಟಿರುತ್ತದೆ.

19. ಒಕ್ಕೂಟವು ಯುದ್ಧ, ಯುದ್ಧದಂತಹ ಚಟುವಟಿಕೆಗಳು, ಭೂಕಂಪ, ಭೂಕುಸಿತ, ಮತೀಯ ಗಲಭೆಗಳು, ದೊಂಬಿ ಗಲಭೆಗಳು, ಸ್ವಾಭಾವಿಕ ಮತ್ತು
ಅಸ್ವಾಭಾವಿಕ ಆಪತ್ತುಗಳಲ್ಲಿ (ಮರಣ ಹೊಂದಿದವರ ಸಂಖ್ಯೆಯ ಹತ್ತಕ್ಕೆ ಮೀರಿದಾಗ) ಒಕ್ಕೂಟವು ಮರಣ ಹೊಂದಿದವರ ಪರಿಹಾರಕ್ಕೆ
ಜವಾಬ್ದಾರಿಯಾಗಿರುವುದಿಲ್ಲ.

**ಮರಣ ಪರಿಹಾರ ಠೇವಣಿ ಹಣದ ಮೇಲಿನ ಪ್ರತಿಫಲ :**

20. ಈ ಯೋಜನೆಯ ಅಡಿಯಲ್ಲಿ ಠೇವಣಿಗೆ ಯಾವುದೇ ರೀತಿಯ ಬಡ್ಡಿಯನ್ನು ನೀಡುವುದಿಲ್ಲ.

21. ಒಕ್ಕೂಟವು ಶೇಕಡ 2% ರ ಬೋನಸನ್ನು ವಾರ್ಷಿಕ ಲೆಕ್ಕದಲ್ಲಿ ಪ್ರತಿ ವರ್ಷ ಮಾರ್ಚಿ 31ಕ್ಕೆ ಬದುಕಿರುವ / ಚಾಲ್ತಿಯಲ್ಲಿರುವ ಸದಸ್ಯರ ಮೇಲೆ ಲೆಕ್ಕ
ಹಾಕುತ್ತದೆ. ಹಾಗೂ ಹೀಗೆ ಲೆಕ್ಕ ಹಾಕಿದ ಬೋನಸ್ಸನ್ನು ಸದಸ್ಯರು ಠೇವಣಿಯ ವಾಪಸ್ಸು ಪಡೆದಾಗ ನೀಡಬಹುದಾಗಿದೆ.

22. ಯಾವುದೇ ರೀತಿಯ ಬಡ್ಡಿಯನ್ನು ಬೋನಸ್ಸಿಗೆ ನೀಡಲಾಗುವುದಿಲ್ಲ.

**ಸದಸ್ಯತ್ವದ ವಾಪಸಾತಿ ಮತ್ತು ಕೊನೆಗೊಳಿಸುವಿಕೆ :**

23. ಮರಣ ಪರಿಹಾರ ಯೋನೆಯಲ್ಲಿರುವ ಸದಸ್ಯನು ತನ್ನ ಠೇವಣಿಯ ವಾಪಸಾತಿಗೆ ಅರ್ಜಿಯನ್ನು ಠೇವಣಿಯ ವಿವರಗಳೊಂದಿಗೆ ಸಂಘಕ್ಕೆ ನೀಡತಕ್ಕದ್ದು.
ನಂತರ ಸಂಘವು ಒಕ್ಕೂಟವು ನಿಗಧಿಪಡಿಸಿರುವ ಅರ್ಜಿನಮೂನೆಯಲ್ಲಿ ವಿವರಗೊಳೊಂದಿಗೆ ಸಲ್ಲಿಸತಕ್ಕದ್ದು. ಒಕ್ಕೂಟವು ವಾಪಸಾತಿಗೆ ಕೇಳಿದ
ಸದಸ್ಯನ ವಿವರಗಳನ್ನು ಪರಿಶೀಲಿಸಿ, ನಂತರ ಠೇವಣಿ ಮತ್ತು ಆ ವರ್ಷದ ಮಾರ್ಚಿ 31ಕ್ಕೆ ನಿಗಧಿಪಡಿಸಿದ ಬೋನಸ್ಸನ್ನು ಅರ್ಜಿ ಪಡೆದ 30
ದಿನಗಳೊಳಗಾಗಿ ಸದಸ್ಯ ಸಂಘಕ್ಕೆ ರವಾನಿಸುತ್ತದೆ. ಠೇವಣಿಯ ವಾಪಸಾತಿ ನಂತರ ಆ ಸದಸ್ಯನ ಸದಸ್ಯತ್ವವು ಮರಣ ಪರಿಹಾರ ಯೋಜನೆಯಲ್ಲಿ
ಸಂಪೂರ್ಣವಾಗಿ ಕೊನೆಗೊಂಡಿರುತ್ತದೆ.

24. ಮರಣ ಪರಿಹಾರ ಯೋಜನೆಯಡಿಯಲ್ಲಿ ಸದಸ್ಯತ್ವವು ಈ ಕೆಳಕಂಡ ಸಂದರ್ಭಗಳಲ್ಲಿ / ದಿನಾಂಕದಂದು ಕೊನೆಗೊಳ್ಳುತ್ತದೆ.
(ಅ) ಒಕ್ಕೂಟವು ಠೇವಣಿಯನ್ನು ವಾಪಸ್ಸು ಮಾಡಿದ ದಿನಾಂಕದಂದು,
(ಆ) ಒಕ್ಕೂಟದಲ್ಲಿ ಸದಸ್ಯ ಸಂಘವು ತನ್ನ ಸದಸ್ಯತ್ವವನ್ನು ವಾಪಸ್ಸು ಪಡೆದಾಗ ಅಥವ ಒಕ್ಕೂಟದ ಸದಸ್ಯತ್ವದ ನಿಯಮದಂತೆ ಸದಸ್ಯತ್ವವು
ಕೊನೆಗೊಂಡ ದಿನಾಂಕದಂದು,
(ಇ) ಮರಣ ಪರಿಹಾರ ಯೋಜನೆಯಡಿಯಲ್ಲಿ ಸದಸ್ಯತ್ವ ಹೊಂದಿದ ಪ್ರತಿಯೊಬ್ಬ ಸದಸ್ಯನಿಗೂ 60 ವರ್ಷ ವಯಸ್ಸು ತುಂಬಿದ
ದಿನಾಂಕದಂದು.
(ಈ) ಸದಸ್ಯನ ಸದಸ್ಯತ್ವವು ಸಂಘದಲ್ಲಿ ಕೊನೆಗೊಂಡ ದಿನಾಂಕದಂದು, ಅಥವ ಒಕ್ಕೂಟದ ಸದಸ್ಯತ್ವದ ನೀತಿ ಮತ್ತು ನಿಯಮಗಳಂತೆ
ಸದಸ್ಯತ್ವದಿಂದ ಸಂಘವನ್ನು ರದ್ದು ಪಡಿಸಿದಾಗ / ಕೊನೆಗೊಂಡ ದಿನಾಂಕದಂದು.
(ಉ) ಸದಸ್ಯನು ಮರಣ ಹೊಂದಿದ ದಿನಾಂಕದಂದು.

25. ನಿಯಮ 23, 24ರ ಪ್ರಕಾರ ಸದಸ್ಯ ಸಂಘವು ಸದಸ್ಯನ ಮರಣ ಹೊಂದುವಿಕೆ/ಸದಸ್ಯತ್ವ ಕೊನೆಗೊಳ್ಳುವಿಕೆಯನ್ನು ಒಕ್ಕೂಟಕ್ಕೆ ತಕ್ಷಣವೇ ತಿಳಿಸಬೇಕು.
ಹಾಗೆ ತಿಳಿಸದಿದ್ದ ಪಕ್ಷದಲ್ಲಿ ಆಗುವ ಅಡಚಣೆ ಮತ್ತು ಆಗುಹೋಗುಗಳಿಗೆ ಒಕ್ಕೂಟವು ಜವಾಬ್ದಾರಿಯಾಗಿರುವುದಿಲ್ಲ ಮತ್ತು ಒಕ್ಕೂಟದಿಂದ ಯಾವುದೇ
ರೀತಿಯ ಪರಿಹಾರ ದೊರೆಯುವುದಿಲ್ಲ.

**ಪರಿಹಾರವನ್ನು ಪಡೆಯುವ ಕಾರ್ಯವಿಧಾನ :**

26. ಸದಸ್ಯನು ಮರಣ ಹೊಂದಿದಾಗ, ಮರಣ ಪ್ರಮಾಣ ಪತ್ರದೊಂದಿಗೆ ಸಂಘವು ನಿಗಧಿಪಡಿಸಿದ ಅರ್ಜಿಯಲ್ಲಿ ಎಲ್ಲಾ ಮಾಹಿತಿಯೊಂದಿಗೆ ಪರಿಹಾರಕ್ಕೆ
ಅರ್ಜಿಯನ್ನು ಸಲ್ಲಿಸತಕ್ಕದ್ದು. ನಂತರ ಸದಸ್ಯ ಸಂಘವು ಒಕ್ಕೂಟವು ನಿಗಧಿಪಡಿಸಿರುವ ಅರ್ಜಿಯಲ್ಲಿ ಮರಣ ಪ್ರಮಾಣ ಪತ್ರ ಹಾಗೂ ಮತ್ತಿತರ
ದಾಖಲೆಗಳೊಂದಿಗೆ ಒಕ್ಕೂಟಕ್ಕೆ ಸಲ್ಲಿಸತಕ್ಕದ್ದು.

27. ಅರ್ಜಿ ಸ್ವೀಕರಿಸಿದ ನಂತರ ಒಕ್ಕೂಟವು ಪರಿಹಾರಕ್ಕೆ ಬಂದಿರುವ ಅರ್ಜಿಯ ವಿಚಾರಣೆ ಮಾಡಿ, ಚೆಕ್ / ಡಿ.ಡಿ. ಮುಖಾಂತರ ಪರಿಹಾರ ಹಣವನ್ನು
ಅರ್ಜಿ ಸ್ವೀಕರಿಸಿದ 30 ದನಗಳೊಳಗಾಗಿ ಸಂಘಕ್ಕೆ ನೀಡತಕ್ಕದ್ದು.

28. ಸಂಘವು ಸದಸ್ಯನಿಂದ ಬರಬೇಕಾದ ಹಣವನ್ನು ಪರಿಹಾರ ಹಣದಲ್ಲಿ ಚುಕ್ತಾ ಮಾಡಿಕೊಂಡು, ಉಳಿದ ಹಣವನ್ನು ಮರಣ ಹೊಂದಿದ ಸದಸ್ಯನ
ವಾರಸುದಾರರಿಗೆ ಪಾವತಿ ಮಾಡುತ್ತದೆ.

29. ಒಕ್ಕೂಟದಿಂದ ಪರಿಹಾರದ ಹಣವು ಬಿಡುಗಡೆಯಾದ ಕ್ಷಣದಿಂದಲೇ ಆ ಸದಸ್ಯನ ಎಲ್ಲಾ ರೀತಿಯ ಜವಾಬ್ದಾರಿಗಳನ್ನು ಒಕ್ಕೂಟವು ಕಳೆದುಕೊಳ್ಳುತ್ತದೆ
ಹಾಗೂ ಯಾವುದೇ ರೀತಿಯ ಕಾನೂನಿನ ಚೌಕಟ್ಟಿನಲ್ಲೂ ವಾರಸುದಾರರು ಒಕ್ಕೂಟದಿಂದ ಪರಿಹಾರವನ್ನು ಕೇಳುವಂತಿರುವುದಿಲ್ಲ.

30. ಈ ಯೋಜನೆಯಡಿಯಲ್ಲಿ ಸಮಯದಿಂದ ಸಮಯಕ್ಕೆ ಮಾಡುವ, ಬದಲಾಯಿಸುವ ಅಥವ ತಿದ್ದುಪಡಿಮಾಡುವ ಎಲ್ಲಾ ಅಧಿಕಾರವನ್ನು ಒಕ್ಕೂಟದ
ಆಡಳಿತ ಮಂಡಳಿಯು ಹೊಂದಿರುತ್ತದೆ ಮತ್ತು ಒಕ್ಕೂಟದ ಆಡಳಿತ ಮಂಡಳಿಯ ತೀರ್ಮಾನವೇ ಅಂತಿಮವಾಗಿರುತ್ತದೆ.

**ಹೇಳಿಕೆ**

ಒಕ್ಕೂಟದ ಮರಣ ಪರಿಹಾರ ಯೋಜನೆಯ ನೀತಿ ಮತ್ತು ನಿಯಮಗಳನ್ನು ಸರಿಯಾಗಿ ಓದಿ ತಿಳಿದುಕೊಂಡು ಮತ್ತು ಒಕ್ಕೂಟದ ಆಡಳಿತ ಮಂಡಳಿಯು
ಸಮಯದಿಂದ ಸಮಯಕ್ಕೆ ತಿದ್ದುಪಡಿ ಮಾಡುವ ಎಲ್ಲಾ ನಿಯಮಗಳಿಗೆ ಬದ್ಧರಾಗಿರುತ್ತೇವೆ ಹಾಗೂ ಅದರಂತೆ ನಡೆದುಕೊಳ್ಳುತ್ತೇವೆ.

ದಿನಾಂಕ :

ಮುದ್ರೆ,                                    ಅಧ್ಯಕ್ಷರು / ಕಾರ್ಯದರ್ಶಿ

Scanned by CamScanner

# ಮಿತವ್ಯಯ ಸಹಕಾರ ಸಂಘಗಳ ಒಕ್ಕೂಟ ನಿಯಮಿತ

(ನೊಂದಣಿ ಸಂಖ್ಯೆ : ಜೆ.ಆರ್.ಬಿ : ಆರ್.ಜಿ.ಎನ್ : 30: 36950 : 2007-08)

ನಂ. 75, 2ನೇ ಮಹಡಿ, 2ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು - 560 018

| ಕ್ರಮ ಸಂಖ್ಯೆ | ಸದಸ್ಯತ್ವ ಸಂಖ್ಯೆ | ಮಪಯೋ ಪ್ರವೇಶ ಸಂಖ್ಯೆ | ಮಪಯೋ ಪ್ರಮಾಣ ಪತ್ರ ಸಂಖ್ಯೆ | ಅನೆಕ್ಸಚರ ಸಂಖ್ಯೆ | ಸದಸ್ಯರ ಹೆಸರು | ನಾಮಿನಿ ಹೆಸರು | ಹುಟ್ಟಿದ ದಿನಾಂಕ | ಪ್ರಾ ಠೇವಣಿ | ಹೆಚ್ಚಿಸಿದ ಠೇವಣಿ | ಶೇಷ ಒಟ್ಟು |
|---|---|---|---|---|---|---|---|---|---|---|
| | | | | | | | | | | |
| | | | | | | | | | | |
| | | | | | | | | | | |
| | | | | | | | | | | |
| | | | | | | | | | | |
| | | | | | | | | | | |
| | | | | | | | | | | |
| | | | | | | | | | | |
| | | | | | | | | | | |
| | | | | | | | | | | |
| | | | | | | | | | | |
| | | | | | | | | | | |
| | | | | | | | ಒಟ್ಟು | | | |

ದಿನಾಂಕ :

ಮುದ್ರೆ

ಸಹಿ

Scanned by CamScanner